# ಹೊಟ್ಟೆಕಿಚ್ಚು ಸುಡುವುದು ಯಾರನ್ನು ?

ಬಹಳ ಹಿಂದೆ ರಾಮಪ್ಪನೆಂಬ ಕಾರ್ಮಿಕನಿದ್ದನು. ತಾನು ದುಡಿದಿದ್ದರಲ್ಲೇ ಸ್ವಲ್ಪ ಉಳಿತಾಯ ಮಾಡಿ ಒಂದು ಎಮ್ಮೆ ಮತ್ತು ಒಂದು ಕೋಣವನ್ನು ಸಂಪಾದಿಸಿದ್ದನು. ತನ್ನ ಕಡೆಗಾಲದಲ್ಲಿ, ತನ್ನಿಬ್ಬರು ಮಕ್ಕಳನ್ನು ಕರೆದು, 'ಇದ್ದುದರಲ್ಲಿಯೇ ಹೇಗೋ ಅನುಸರಿಸಿಕೊಂಡು ಜೀವನ ನಡೆಸಬೇಕು' ಎಂದು ಹೇಳಿದ. ಹಿರಿಯ ಮಗನಿಗೆ, 'ಇನ್ನೂ ಅವಿವಾಹಿತನಾಗಿರುವ ತಮ್ಮನ ಜವಬ್ದಾರಿಯನ್ನು ನೋಡಿಕೊ' ಎಂದು ಕಿವಿಮಾತನ್ನೂ ಹೇಳಿದ. ರಾಮಪ್ಪ ತೀರಿಹೋದ ಮೇಲೆ, ಅಣ್ಣ ಮನೆಯ ಯಜಮಾನನಾದನು. ಅವನು ತಮ್ಮನನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದನು. ತಮ್ಮನೂ ಅಣ್ಣನ ಮಾತನ್ನು ಕೇಳಿಕೊಂಡು, ಅಣ್ಣ ಹೇಳಿದ ಕೆಲಸ ಮಾಡಿಕೊಂಡು ಸುಖವಾಗಿಯೇ ಇದ್ದನು. ಅಣ್ಣ–ತಮ್ಮರ ನಡುವಿನ ಈ ಬಾಂಧವ್ಯ ಅಣ್ಣನ ಹೆಂಡತಿಗೆ ಸಹಿಸಲು ಆಗದಿದ್ದರೂ, ಮನೆಗೆ ಒಬ್ಬ ದುಡಿಯುವ ಆಳಾಗಿ ಇರಲಿ ಎಂದು ಸುಮ್ಮನಿದ್ದಳು.

ಮುಂದೊಂದು ದಿನ ಅಣ್ಣ, ತಮ್ಮನಿಗೆ ಒಂದು ಹುಡುಗಿಯನ್ನು ನೋಡಿ ಮದುವೆ ಮಾಡಿದನು. ಮದುವೆಯ ಸಂಭ್ರಮದಲ್ಲಿ ತಮ್ಮ ಓಡಾಡಿಕೊಂಡಿದ್ದನು. ಹೊಸದಾಗಿ ಮದುವೆಯಾದ ದಂಪತಿ ಕೆಲಸದ ಕಡೆ ಹೆಚ್ಚು ಗಮನ ಕೊಡದೆ ಸಂಭ್ರಮದಲ್ಲಿ ಮುಳುಗಿದ್ದುದನ್ನು ಅತ್ತಿಗೆ ಸಹಿಸದಾದಳು. ಮನೆಯಲ್ಲಿ ಜಗಳ ತೆಗೆದು, ಅಣ್ಣ ಮತ್ತು ತಮ್ಮ ಬೇರೆ ಬೇರೆ ಸಂಸಾರ ಹೂಡುವಂತೆ ಮಾಡಿದಳು. ಅಣ್ಣ, ತಮ್ಮನಿಗೆ ಕೋಣವನ್ನು ಕೊಟ್ಟು ಎಮ್ಮೆಯನ್ನು ತಾನೇ ಇಟ್ಟುಕೊಳ್ಳುವಂತೆ ಅತ್ತಿಗೆ ನೋಡಿಕೊಂಡಳು. ತಮ್ಮನೂ 'ಪಾಲಿಗೆ ಬಂದದ್ದು ಪಂಚಾಮೃತ' ಎಂದುಕೊಂಡು ಸಂಸಾರ ನಡೆಸತೊಡಗಿದನು.

ಅಣ್ಣನ ಮನೆಯಲ್ಲಿದ್ದ ಎಮ್ಮೆ ಕರು ಹಾಕಿ, ಹಾಲು ಕೊಡತೊಡಗಿತು. ಅತ್ತಿಗೆ ಹಾಲು, ಮೊಸರು, ಬೆಣ್ಣೆ ಮಾರಿ ಮೈದುನ ಮತ್ತು ಓರಗಿತ್ತಿಯರ ಮುಂದೆ ಬೀಗತೊಡಗಿದಳು. ಇತ್ತ ತಮ್ಮನೂ ಕೋಣವನ್ನು ಮಾರಿ ತಾನೂ ಒಂದು ಎಮ್ಮೆ ಕೊಂಡುಕೊಂಡು, ಮನೆಯಲ್ಲಿ ಕರಾವು ನಡೆಸಬೇಕೆಂದು ಯೋಚಿಸಿ, ಅದನ್ನು ತನ್ನ ಹೆಂಡತಿಯ ಮುಂದೆ ಹೇಳಿಕೊಂಡನು. ಅದಕ್ಕೆ ಅವಳೂ ಸಮ್ಮತಿಸಿದಳು. ಆ ವಿಷಯ ಹೇಗೋ ಅತ್ತಿಗೆಯ ಕಿವಿಗೆ ಬಿತ್ತು. ಇನ್ನು, ಇವರೂ ಎಮ್ಮೆ ಕಟ್ಟಿದರೆ, ಕರಾವು ನಡೆಸಿದರೆ ತನ್ನ ಕಿಮ್ಮತ್ತು ಕಡಿಮೆಯಾಗುತ್ತದೆ ಎಂದೆಲ್ಲಾ ಯೋಚಿಸಿದ ಅವಳು ಹಸಿರು ಔಷಧಿಯೊಂದನ್ನು, ಯಾರಿಗೂ ಕಾಣಿಸದಂತೆ ಕೋಣಕ್ಕೆ ತಿನ್ನಿಸಿಬಿಟ್ಟಳು. ರಾತ್ರಿ ಕಳೆದು ಬೆಳಗಾಗುವುದರೊಳಗೆ ಕೋಣ ಸತ್ತುಹೋಯಿತು. ತಮ್ಮ ತನ್ನ ಹೀನ ಅದೃಷ್ಟಕ್ಕೆ ತನ್ನನ್ನೇ ಬೈದುಕೊಂಡು, ಕೋಣದ ಚರ್ಮವನ್ನಾದರೂ ಮಾರಿ, ಬಂದ ಹಣದಲ್ಲಿ ಒಂದು ಕುರಿಮರಿಯನ್ನಾದರೂ ತಂದು ಸಾಕಬೇಕೆಂದು ಯೋಚಿಸಿದನು. ಅದರಂತೆ ಕೋಣದ ಚರ್ಮವನ್ನು ಸುಲಿದು, ಉಪ್ಪು ಹಾಕಿ ಒಣಗಿಸಿ, ಅದನ್ನು ಮಾರಲು ಪೇಟೆಗೆ ಹೊರಟನು.

ಪೇಟೆಗೆ ಹೋಗಬೇಕಾದರೆ ಕಾಡಿನ ದಾರಿಯಲ್ಲಿ ಹೋಗಬೇಕಾಗಿತ್ತು. ದಾರಿ ದೂರವಿದ್ದು, ಕಾಡು ದಾಟುವಷ್ಟರಲ್ಲಿ ಕತ್ತಲಾಗಿ, ಮಳೆಯೂ ಬರಲಾರಂಭಿಸಿತು. ರಾತ್ರಿ ಕಾಡಿನಲ್ಲಿಯೇ ಕಳೆಯಲು ನಿರ್ಧರಿಸಿದ ತಮ್ಮ, ತನ್ನ ಹೆಂಡತಿ ಕಟ್ಟಿಕೊಟ್ಟಿದ್ದ ಬುತ್ತಿ ತಿಂದು, ದೊಡ್ಡದಾದ ಮರವೊಂದನ್ನು ಹತ್ತಿ, ದಪ್ಪ ಕೊಂಬೆಯೊಂದರಲ್ಲಿ, ಚಳಿ, ಮಳೆಯಿಂದ ರಕ್ಷಣೆ ಪಡೆಯಲು, ಜೊತೆಯಲ್ಲಿದ್ದ ಕೋಣದ ಚರ್ಮವನ್ನೇ ತನಗೆ ಸುತ್ತಿಕೊಂಡು ಮಲಗಿಕೊಂಡ.

ಬೆಳಗಾಗಲು ಇನ್ನೂ ಸಾಕಷ್ಟು ಸಮಯವಿರುವಾಗಲೇ, ಯಾರೋ ಮಾತನಾಡುವ ಧ್ವನಿಯಿಂದ ತಮ್ಮನಿಗೆ ಎಚ್ಚರವಾಯಿತು.

ಮಾತನಾಡುವವರು ಯಾರೆಂದು, ಎಲ್ಲಿಂದ ಮಾತನಾಡುತ್ತಿದ್ದಾರೆಂದು ಕಿವಿಗೊಟ್ಟು ಆಲಿಸಿದ. ಆತ ಮಲಗಿದ್ದ ಮರದ ಕೆಳಗಡೆಯೇ ನಾಲ್ಕೈದು ಜನ ಕಳ್ಳರ ಗುಂಪೊಂದು ಕುಳಿತು, ಅಂದಿನ ತಮ್ಮ ದರೋಡೆಯನ್ನು ಹಂಚಿಕೊಳ್ಳತೊಡಗಿದ್ದರು. ಅವರು ಕಳ್ಳರೆಂದು ತಿಳಿದಾಕ್ಷಣ ತಮ್ಮನಿಗೆ

